ಕರ್ನಾಟಕಸರ್ಕಾರ

ಸಂಖ್ಯೆ:ಮುಲೆಪ/ಟೆಂಡರ್/01/2024–25/363

ಮುಖ್ಯಲೆಕ್ಕಪರಿಶೋಧಕರಕಛೇರಿ,
ಬೃಹತ್ಬೆಂಗಳೂರುಮಹಾನಗರಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ,
ವಾಣಿಜ್ಯಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)
(ಉಪ್ಪಾರಪೇಟೆಪೋಲೀಸ್ಠಾಣೆಹಿಂಭಾಗ)
ಬೆಂಗಳೂರು–560009. ದಿನಾಂಕ:20–09–2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮುಖ್ಯಲೆಕ್ಕಪರಿಶೋಧಕರ ಕಛೇರಿಗೆ ಕಂಪ್ಯೂಟರ್ ಆಪರೇಟರ್‌ಗಳು, ಗ್ರೂಪ್ ಡಿ ಹಾಗೂ ಸ್ವಚ್ಛತಾ ಸಿಬ್ಬಂದಿಗಳ ಸೇವೆಯನ್ನು ಹೊರ ಸಂಪನ್ಮೂಲ ಏಜೆನ್ಸಿಯಿಂದ ಪಡೆಯುವ ಬಗ್ಗೆ ವಾರ್ಷಿಕ ಅಂದಾಜು ವಹಿವಾಟು ರೂ. **50ಲಕ್ಷಗಳು** ಆಗಬಹುದಾಗಿದ್ದು, ಈ ಬಗ್ಗೆ ಇ–ಟೆಂಡರ್ ಮೂಲಕ ದರಪಟ್ಟಿಗಳನ್ನು ಆಹ್ವಾನಿಸಲಾಗಿರುತ್ತದೆ. ವಿವರ ಈ ಕೆಳಕಂಡಂತೆ ಇರುತ್ತದೆ.

1	ಟೆಂಡರ್ ಪ್ರಕಟಣೆ ದಿನಾಂಕ:		20/09/2024
2	ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳುವಪ್ರಾರಂಭದಿನಾಂಕ		25/09/2024
3	ಟೆಂಡರ್ ಸಲ್ಲಿಸಲುಕೊನೆಯ ದಿನಾಂಕ:		10/10/2024
4	ಇ.ಎಂ.ಡಿ ಮೊತ್ತ		ರೂ.1,00,000.00
5	ಟೆಂಡರ್‌ತೆರೆಯುವ ದಿನಾಂಕ:		
	1	ತಾಂತ್ರಿಕ ಬಿಡ್‌ತೆರೆಯುವ	14/10/2024
	2	ಆರ್ಥಿಕ ಬಿಡ್‌ತೆರೆಯುವ	ತಾಂತ್ರಿಕ ಬಿಡ್ ಅನುಮೋದನೆಯ ನಂತರ
	ಹೆಚ್ಚಿನ ವಿವರಗಳನ್ನು ವೆಬ್ ಸೈಟ್:kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮುಖ್ಯಲೆಕ್ಕಪರಿಶೋಧಕರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.		
6	ಟೆಂಡರ್‌ಆಹ್ವಾನಿಸುವ ಅಧಿಕಾರಿ, ಮುಖ್ಯಲೆಕ್ಕಪರಿಶೋಧಕರು, ಬಿಬಿಎಂಪಿ,ಬೆಂಗಳೂರು.		

Scanned with OKEN Scanner

Draft Tender Schedule

Tender No BBMP/2024-25/SE0971 **dated:20-09-2024**

Tender Document
for supply of Data Entry Operator,Group-D,Sweepers on Outsource basis for
Office of the Chief Auditor office BBMP,Bangalore..

ಮುಖ್ಯ ಲೆಕ್ಕ ಪರಿಶೋಧಕರಕಛೇರಿ,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ, ವಾಣಿಜ್ಯಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್),
(ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ)
ಬೆಂಗಳೂರು–560009.

Scanned with OKEN Scanner

ಮುಖ್ಯ ಲೆಕ್ಕ ಪರಿಶೋಧಕರಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ, ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್),
(ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ)
ಬೆಂಗಳೂರು–560009.

Tender No BBMP/2024-25/SE0971 ದಿನಾಂಕ:20–09–2024

: ಇ–ಪ್ರೊಕ್ಯೂರ್‌ಮೆಂಟ್‌ಟೆಂಡರ್ ಪ್ರಕಟಣೆ :

ಮುಖ್ಯಲೆಕ್ಕಪರಿಶೋಧಕರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳು, ಗ್ರೂಪ್ ಡಿ, ಸ್ವಚ್ಛತಾ ಸಿಬ್ಬಂದಿ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ

: ಇ–ಪ್ರೊಕ್ಯೂರ್‌ಮೆಂಟ್‌ಟೆಂಡರ್ ಪ್ರಕಟಣೆ :

E-PROCUREMENT TENDER NOTIFICATION

(ದ್ವಿ ಲಕೋಟೆ ಪದ್ಧತಿ)

Calendar of Events

Bidding Schedule

• Last date for submission of tenders	10-10-2024 5:00PM
• Date and time of opening of pre-qualification/ Technical bids	14-10-2024 5:00PM
• Date and time of opening of financial bids	ತಾಂತ್ರಿಕ ಬಿಡ್ ಅನುಮೋದನೆಯ ನಂತರ
• Place of opening of bids	ಮುಖ್ಯ ಲೆಕ್ಕ ಪರಿಶೋಧಕರಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 2 & 3ನೇ ಮಹಡಿ, ಬಿಬಿಎಂಪಿ, ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್) (ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ) ಬೆಂಗಳೂರು–560009.
• Address for communication	ಮುಖ್ಯ ಲೆಕ್ಕ ಪರಿಶೋಧಕರಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 2 & 3ನೇ ಮಹಡಿ, ಬಿಬಿಎಂಪಿ, ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್) (ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ) ಬೆಂಗಳೂರು–560009.

Scanned with OKEN Scanner

ಕರ್ನಾಟಕಸರ್ಕಾರ

ಸಂಖ್ಯೆ:ಮುಲೆಪ/ಟೆಂಡರ್/01/2024–25

ಮುಖ್ಯಲೆಕ್ಕಪರಿಶೋಧಕರಕಛೇರಿ,
ಬೃಹತ್ಬೆಂಗಳೂರುಮಹಾನಗರಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ,
ವಾಣಿಜ್ಯಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)
(ಉಪ್ಪಾರಪೇಟೆಪೋಲೀಸ್ಠಾಣೆಹಿಂಭಾಗ)
ಬೆಂಗಳೂರು–560009. ದಿನಾಂಕ:20–09–2024

: ಇ–ಪ್ರೊಕ್ಯೂರ್‌ಮೆಂಟ್‌ಟೆಂಡರ್ ಪ್ರಕಟಣೆ ;

ಮುಖ್ಯಲೆಕ್ಕಪರಿಶೋಧಕರ ಕಛೇರಿಯ ಕಾರ್ಯನಿರ್ವಹಿಸಲು ಕಂಪ್ಯೂಟರ್‌ಆಪರೇಟರ್‌ಗಳು, ಗ್ರೂಪ್ ಡಿ, ಸ್ವಚ್ಛತಾ ಸಿಬ್ಬಂದಿ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ

E-PROCUREMENT TENDER NOTIFICATION

(ದ್ವಿ ಲಕೋಟೆ ಪದ್ದತಿ)

ಅ) ಪೀಠಿಕೆ :–

ಮುಖ್ಯಲೆಕ್ಕಪರಿಶೋಧಕರ ಕಛೇರಿಯ ಕಾರ್ಯನಿರ್ವಹಿಸಲು ಕಂಪ್ಯೂಟರ್ ಆಪರೇಟರ್‌ಗಳು,ಗ್ರೂಪ್ ಡಿ ಹಾಗೂ ಸ್ವಚ್ಛತಾ ಸಿಬ್ಬಂದಿ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯಿಂದ ಎರಡು ವರ್ಷದ ಅವಧಿಗೆ ಸೀಮಿತಗೊಂಡಂತೆ ತಾತ್ಕಾಲಿಕವಾಗಿ ಸಿಬ್ಬಂದಿ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ(**KTTP**) 1999 ಮತ್ತು ನಿಯಮಗಳು 2000 ರ ಪ್ರಕಾರ ಇ–**procurement** ಟೆಂಡರ್ ಮೂಲಕ ಮಾನವಸೇವೆ ಪಡೆಯಲು ಉದ್ದೇಶಿಸಲಾಗಿದೆ.

ಆ) ಟೆಂಡರ್ ದಾಖಲೆಗಳು ಮತ್ತು ಮರುಟೆಂಡರ್‌ದಾರರಿಗೆ ಸೂಚನೆಗಳು :–

1: ಟೆಂಡರ್‌ಉದ್ದೇಶ:–

ಕಛೇರಿಗಳಲ್ಲಿ ಖಾಲಿ ಇರುವ ಕಂಪ್ಯೂಟರ್‌ಆಪರೇಟರ್‌ಗಳುಗ್ರೂಪ್ 'ಡಿ' ಹಾಗೂ ಸ್ವಚ್ಛತಾ ವೃಂದದ ಹುದ್ದೆಗಳಿಗೆ ಸಿಬ್ಬಂದಿಗಳ ಅವಶ್ಯಕತೆ ಇದ್ದು, ಈ ಸಿಬ್ಬಂದಿಗಳ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯಿಂದ ಪಡೆಯಲು ಮುಖ್ಯ ಲೆಕ್ಕಪರಿಶೋಧಕರ ಕಛೇರಿ ಬಿಬಿಎಂಪಿ ಬೆಂಗಳೂರು ಇವರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ	ಹೊರ ಸಂಪನ್ಮೂಲ ಏಜೆನ್ಸಿಯಿಂದ ಬೇಕಾದ ಹುದ್ದೆ ಹೆಸರು		ಅಗತ್ಯವಿರುವ ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ
	ಎ.	DATA ENTRY OPERATOR	10	ಅನುಬಂಧ–1ರಲ್ಲಿ ನಮೂದಿಸಿ – ರುವಂತೆ
	ಬಿ	GROUP-D	2	
	ಸಿ	SWEEPERS	2	
	ಒಟ್ಟು:		14	

Scanned with OKEN Scanner

ಮಾನವ ಸಂಪನ್ಮೂಲ ಸೇವೆ ಒದಗಿಸಲು ಅರ್ಹತೆಯುಳ್ಳ ಮತ್ತು ವಿವಿಧ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಣಿ ಮಾಡಿಕೊಂಡ ವ್ಯಕ್ತಿಗಳು/ಸಂಸ್ಥೆಗಳು ಸಲ್ಲಿಸಬಹುದು. ಟೆಂಡರ್ ಫಾರಂ ಹಾಗೂ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.(**Website.kppp.karnataka.gov.in.)**

2.ಟೆಂಡರ್‌ದಾರರ ಅರ್ಹತೆ :–

ಟೆಂಡರ್‌ದಾರರು ಯಾವುದೇ ಕಾನೂನಿನಡಿಯಲ್ಲಿ ಅನರ್ಹರೆಂದು ಪರಿಗಣಿತವಾಗಿರಬಾರದು. ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಅಲ್ಪಾವಧಿ ಇ–ಟೆಂಡರ್‌ನ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣ ಬೇಕಾದಲ್ಲಿ ಟೆಂಡರ್‌ದಾರರು ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ನೀಡಿ ಟೆಂಡರ್ ಕರೆದಿರುವ ಪ್ರಾಧಿಕಾರದಿಂದ ಮಾಹಿತಿ ಪಡೆಯಬಹುದು.

3.ಟೆಂಡರ್ ದಾಖಲೆಗಳ ತಿದ್ದುಪಡಿ :–

ಟೆಂಡರ್ ಸಲ್ಲಿಸಲು ನಿಗಧಿಪಡಿಸಲಾಗಿರುವ ಅಂತಿಮ ದಿನಾಂಕಕ್ಕೆ ಒಂದು ದಿವಸ ಮೊದಲು ಟೆಂಡರ್‌ಗೆ ಸಂಬಂಧಿಸಿದ ದಾಖಲೆಗಳನ್ನು ತಿದ್ದುಪಡಿ ಮಾಡುವ/ಬದಲಾಯಿಸುವ ಅಧಿಕಾರ ಟೆಂಡರ್ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿ ಆದಲ್ಲಿ ಅದನ್ನು e-portalನಲ್ಲಿ ಪರಿಶೀಲಿಸಬಹುದಾಗಿದೆ.

4. ಟೆಂಡರ್ ದಸ್ತಾವೇಜುಗಳಲ್ಲಿರುವ ದಾಖಲೆಗಳು :–

ಟೆಂಡರ್ ಕರೆದಿರುವ ಬಗ್ಗೆ ವಿವರಗಳು, ಅರ್ಹತೆಗಳು, ನಿಬಂಧನೆಗಳು ಇತ್ಯಾದಿಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯ ಇದೆ.

1. ಟೆಂಡರ್ ಆಹ್ವಾನ
2. ಟೆಂಡರ್‌ದಾರರಿಗೆ ಸೂಚನೆಗಳು
3. ಟೆಂಡರ್ ಫಾರಂ 'ಎ' (ತಾಂತ್ರಿಕ ಲಕೋಟೆ)
4. ಟೆಂಡರ್‌ಗೆ ಸಂಬಂಧಿಸಿದಂತೆ ಸೂಚನೆಗಳು, ಷರತ್ತುಗಳು ಮತ್ತು ತಾಂತ್ರಿಕ ವಿವರಗಳು.
5. ಇ.ಎಂ.ಡಿ ಬ್ಯಾಂಕ್ ಗ್ಯಾರಂಟಿ ವಿವರಗಳು
6. ಕಾರ್ಯಾಧಾರಿತ ಭದ್ರತೆ **(Performance security)** ವಿವರಗಳು
7. ಕರಾರು ಒಪ್ಪಂದ ಪತ್ರ ಹಾಗೂ ಇನ್ನಿತರ ಮಾಹಿತಿಗಳು.

ಟೆಂಡರ್‌ದಾರರು ಈ ಎಲ್ಲಾ ದಾಖಲೆಗಳು, ನಿಬಂಧನೆಗಳು ಮತ್ತು ಟೆಂಡರ್‌ನ ಷರತ್ತುಗಳನ್ನು ಹಾಗೂ ಟೆಂಡರ್‌ದಾರರಿಗೆ ಇರುವ ಅರ್ಹತಾ ಸೂಚನೆಗಳನ್ನು ಪರಿಶೀಲಿಸಿ ಅರ್ಥ ಮಾಡಿಕೊಂಡು ಸೂಕ್ತ ಮಾಹಿತಿ ಮತ್ತು ದಾಖಲಾತಿಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಟೆಂಡರ್ ಸಲ್ಲಿಸುವುದು. ಅಪೂರ್ಣ ಮಾಹಿತಿಯುಳ್ಳ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5.ಟೆಂಡರ್ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳು :–

ಟೆಂಡರ್ ಸಲ್ಲಿಸುವವರು 2 ಲಕೋಟೆ ಪದ್ದತಿಯಲ್ಲಿ ಅಂದರೆ, ಟೆಂಡರ್ ಫಾರಂ ತಾಂತ್ರಿಕ ಲಕೋಟೆ (ಲಕೋಟೆ ಸಂಖ್ಯೆ 1) ಮತ್ತು ಆರ್ಥಿಕ ಲಕೋಟೆ (ಲಕೋಟೆ ಸಂಖ್ಯೆ 2) ಯಲ್ಲಿ ನಿಗದಿತ ಫಾರಂಗಳಲ್ಲಿ ವಿವರಗಳನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು.

Scanned with OKEN Scanner

5(1). ತಾಂತ್ರಿಕ ಲಕೋಟೆಯಲ್ಲಿ ಸಲ್ಲಿಸಬೇಕಾದ ವಿವರಗಳು :–

ಟೆಂಡರ್ ಸಲ್ಲಿಸಬೇಕಾದ ತಾಂತ್ರಿಕ ದಾಖಲಾತಿಗಳು ಈ ಕೆಳಕಂಡಂತಿದ್ದು, ಆನ್‌ಲೈನ್ ಮೂಲಕ ಇ–ಪೋರ್ಟಲ್ ನಲ್ಲಿ ಎಲ್ಲಾ ದಾಖಲಾತಿಗಳ ಮೂಲ ಪ್ರತಿಯನ್ನು ಅನುಕ್ರಮವಾಗಿ ಅಪ್‌ಲೋಡ್ ಮಾಡಬೇಕು ಹಾಗೂ ಟೆಂಡರ್ ಸಲ್ಲಿಸಲು ನಿಗಧಿಪಡಿಸಲಾಗಿರುವ ಅಂತಿಮ ದಿನಾಂಕದಂದು ಅಪ್‌ಲೋಡ್ ಮಾಡಲಾಗಿರುವ ಎಲ್ಲಾ ದಾಖಲಾತಿಗಳ ಒಂದು ಜೆರಾಕ್ಸ್ ಪ್ರತಿಯನ್ನು ನೋಟರಿಯಿಂದ ದೃಢೀಕರಿಸಿ ಈ ಕಛೇರಿಗೆ ಸಲ್ಲಿಸಿ ಸ್ವೀಕೃತಿ ಪಡೆಯಬೇಕು. ಮತ್ತು ಟೆಂಡರ್ ತೆರೆಯುವ/ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಈ ಎಲ್ಲಾ ದಾಖಲಾತಿಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಒಳಪಡಿಸಬೇಕು.

1. ರೂ 1,00,000/–ಇಂ.ಎಂ.ಡಿ ಬಾಬ್ತನ್ನು (ವಾರ್ಷಿಕ ಹೊರಗುತ್ತಿಗೆ ಸಿಬ್ಬಂದಿ ವೆಚ್ಚದ ಶೇ.2 ರಷ್ಟು)ಇ–ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿ ಸಲ್ಲಿಸುವುದು. ಇ–ಟೆಂಡರ್ ದಸ್ತಾವೇಜಿನ ಜೊತೆಗಿರುವ ನಮೂನೆಯಲ್ಲಿ ಇ.ಎಂ.ಡಿ. ಪಾವತಿಸಿದ ಮಾಹಿತಿಯನ್ನು ಸಲ್ಲಿಸುವುದು.
2. ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆಯನ್ನುಒದಗಿಸುವ ಸಂಬಂಧ ವ್ಯವಹಾರ ನಡೆಸಲು(Company &Firm)ಸಕ್ಷಮ ಪ್ರಾಧಿಕಾರದಿಂದ ನೊಂದಣಿ ಮಾಡಿಸಿರಬೇಕು ಅಥವಾ ಪರವಾನಗಿಯನ್ನು ಪಡೆದಿರಬೇಕು. (Indian Company or firm ACT Should be registered)
3. ಕಾರ್ಮಿಕ ಇಲಾಖೆಯಿಂದ ಪಡೆದಿರುವ ಫಾರಂ ಸಿ ಮತ್ತು ಡಿ ಪರವಾನಗಿ ಪ್ರತಿ ಹಾಗೂ ಕಳೆದ 03 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.
4. ಕಾರ್ಮಿಕ ಭವಿಷ್ಯ ನಿಧಿಯಿಂದ ಪಡೆದಿರುವ ಪರವಾನಗಿ ಪ್ರತಿ ಹಾಗೂ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.
5. ಇ.ಎಸ್.ಐ.ಸಿ (ಕಾರ್ಮಿಕರಾಜ್ಯ ವಿಮಾ ಇಲಾಖೆ) ಇಂದ ಪಡೆದಿರುವ ಪರವಾನಗಿ ಪ್ರತಿ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.
6. ಜಿ.ಎಸ್.ಟಿ ಪರವಾನಗಿ ಪ್ರತಿ ಲಗತ್ತಿಸುವುದು ಹಾಗೂ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.
7. ವೃತ್ತಿತೆರಿಗೆಕಾಯ್ದೆಯಡಿ ಪಡೆದಿರುವ ಪರವಾನಗಿ ಪ್ರತಿ ಮತ್ತು ಕಳೆದ 03 ವರ್ಷಗಳ ವೃತ್ತಿತೆರಿಗೆಕ್ಲಿಯರೆನ್ಸ್ ಪ್ರಮಾಣ ಪತ್ರ ಲಗತ್ತಿಸುವುದು.
8. ಸಂಸ್ಥೆ/ಸಂಘ/ಕಂಪನಿ ಪಾನ್‌ಕಾರ್ಡ್ ಪ್ರತಿ ಲಗತ್ತಿಸುವುದು.
9. ಸಂಸ್ಥೆ/ಕಂಪನಿ ಆದಾಯತೆರಿಗೆಯನ್ನು 2021–22, 2022–23 ಮತ್ತು 2023–24ನೇ ಆರ್ಥಿಕ ವರ್ಷಗಳಲ್ಲಿ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು.
10. ಕಳೆದ ಮೂರು ವರ್ಷಗಳಿಂದ ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಪ್ರಾಧಿಕಾರ/ಇತರೆ ಸಂಸ್ಥೆಗಳಿಗೆ ಹೊರಗುತ್ತಿಗೆಯ ಸಿಬ್ಬಂದಿಗಳನ್ನು ಯಶಸ್ವಿಯಾಗಿ ಒದಗಿಸಿರುವ ಅನುಭವಇರಬೇಕು ಮತ್ತು ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.
11. ಹಿಂದಿನ ಮೂರು ವರ್ಷಗಳಲ್ಲಿ ಅಂದರೆ2021–22, 2022–23 ಮತ್ತು 2023–24 ನೇ ಸಾಲಿನ ಚಾರ್ಟರ್ಡ್‌ಅಕೌಂಟೆಂಟ್‌ರವರಿಂದ ದೃಢೀಕರಿಸಿದ ವಾರ್ಷಿಕ ವಹಿವಾಟುಗಳ ದಾಖಲೆಗಳು, ಬ್ಯಾಲೆನ್ಸ್‌ಶೀಟ್, ಆಡಿಟ್ ವರಧಿಯ ದಾಖಲೆಗಳನ್ನು ಸಲ್ಲಿಸಬೇಕು ಹಾಗೂ ಟೆಂಡರ್‌ದಾರರು ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ಮೊತ್ತ ಪ್ರತಿ ವರ್ಷ ಕನಿಷ್ಟ ₹50ಲಕ್ಷ ಇರತಕ್ಕದ್ದು.
12. ಎ.ಡಿ.ಜಿ.ಪಿ ಇವರಿಂದ ಲೈಸೆನ್ಸ್ ಪ್ರತಿ.
13. ಟೆಂಡರ್‌ಗಿಟ್ಟ ಮೊಬಲಗಿನ ಶೇ 30ರಷ್ಟು(**15,00,000**)ರೂ.ಹಣದ ಬಗ್ಗೆ ದೃಢೀಕರಿಸಿರುವಬ್ಯಾಂಕ್ ಸಾಲ್ವೆನ್ಸಿ/ಲೈನ್‌ಆಫ್‌ಕ್ರೆಡಿಟ್ ಪ್ರಮಾಣ ಪತ್ರವನ್ನು, ಮುಖ್ಯಲೆಕ್ಕಪರಿಶೋಧಕರಕಛೇರಿ.ಬಿಬಿಎಂಪಿ, ಬೆಂಗಳೂರುಇವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು.
14. ಪಾಲಿಕೆಯು ಟೆಂಡರ್‌ದಾರರಿಗೆ ಕಾರಣಾಂತರದಿಂದ ಬಿಲ್‌ನ ಮೊತ್ತ ಪಾವತಿಸಲು ವಿಳಂಬವಾದಲ್ಲಿ ಸದರೀ ಕಾರಣ ನೀಡದೇ ಸಿಬ್ಬಂದಿಗಳಿಗೆ ವೇತನ ಪಾವತಿಸುವ ಬಗೆಗೆ ಒಪ್ಪಿಗೆ ಪತ್ರ.

Scanned with OKEN Scanner

15. ಏಜೆನ್ಸಿಯು ಸ್ಥಳೀಯವಾಗಿ ಕಛೇರಿ ಹೊಂದಿರುವ ಬಗ್ಗೆ ಅಗತ್ಯ ದಾಖಲೆಗಳಾದ ಲೇಬರ್ ಲೈಸೆನ್ಸ್ ಅಥವಾ ಟ್ರೇಡ್ ಲೈಸೆನ್ಸ್ ಅನ್ನು ಸಲ್ಲಿಸತಕ್ಕದ್ದು.

16. ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೂ ರೂ.100 ರ ಛಾಪಾ ಕಾಗದದಲ್ಲಿ ಕಪ್ಪು ಪಟ್ಟಿಯಲ್ಲಿ ಸೇರಿರದೇ ಇರುವ ಬಗ್ಗೆ ಹಾಗೂ ಚುನಾಯಿತ ಸದಸ್ಯರಲ್ಲದೇ ಇರುವ ಬಗ್ಗೆ ಅಫಿಡೆವಿಟ್ ಮೂಲ ಪ್ರತಿಯ ದೃಢೀಕೃತ ಪ್ರತಿ.

ಟೆಂಡರ್‌ದಾರರು ಈ ಎಲ್ಲಾ ದಾಖಲೆಗಳು ನಿಬಂಧನೆಗಳು ಮತ್ತುಟೆಂಡರ್‌ನ ಷರತ್ತುಗಳನ್ನು ಹಾಗೂ ಟೆಂಡರ್‌ದಾರರಿಗೆ ಇರುವ ಅರ್ಹತಾ ಸೂಚನೆಗಳನ್ನು ಪರಿಶೀಲಿಸಿ ಅರ್ಥಯಿಸಿಕೊಂಡು ಸೂಕ್ತ ಮಾಹಿತಿ ಮತ್ತು ದಾಖಲೆಗಳೊಂದಿಗೆ ಪೂರ್ಣ ಪ್ರಮಾಣದಲ್ಲಿ ಟೆಂಡರ್ ಸಲ್ಲಿಸುವುದು. ಅಪೂರ್ಣ ಮಾಹಿತಿಯುಳ್ಳ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

5(2). ಆರ್ಥಿಕ ಲಕೋಟೆಯಲ್ಲಿ ಸಲ್ಲಿಸಬೇಕಾದ ವಿವರಗಳು :–

- ಆರ್ಥಿಕ ಲಕೋಟೆಯಲ್ಲಿ ಟೆಂಡರ್ ದರವನ್ನು ಸಂಖ್ಯೆ ಹಾಗೂ ಅಕ್ಷರಗಳಲ್ಲಿ ನಮೂದಿಸಿ ಸಲ್ಲಿಸಬೇಕು ಹಾಗೂ ಸದರಿ ದರಗಳು ಕಾರ್ಮಿಕ ಇಲಾಖೆಯವರು ನಿಗದಿಪಡಿಸಿರುವ ಇತ್ತೀಚಿನ ಕನಿಷ್ಟ ವೇತನ ದರಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.
- ಆರ್ಥಿಕ ಟೆಂಡರ್‌ನಲ್ಲಿ ಟೆಂಡರ್‌ದಾರರು ತಾನು ನೀಡುವ ಪ್ರತಿ ಸಿಬ್ಬಂದಿ ಸೇವೆಗೆ ಸೇವಾ ವೆಚ್ಚವನ್ನು ಮಾತ್ರ ನಮೂದಿಸಬೇಕು. ಈ ಸೇವಾ ವೆಚ್ಚವನ್ನು ಪ್ರತಿ ಸಿಬ್ಬಂದಿ ಪಡೆಯುವ ಒಟ್ಟು ವೇತನಕ್ಕೆ (ವೇತನ + ವಂತಿಕೆಗಳು) ಶೇಕಡವಾರು ಪ್ರಮಾಣದಲ್ಲಿ ನಮೂದಿಸಬೇಕು.
- **ಶೇ.2% ಕ್ಕಿಂತ ಕಡಿಮೆ ಸೇವಾ ಶುಲ್ಕವನ್ನು ನಮೂದಿಸಬಾರದು,ಶೇಕಡಾ 2% ಕ್ಕಿಂತಕಡಿಮೆ ಸೇವಾ ಶುಲ್ಕವನ್ನು ನಮೂದಿಸುವ ಟೆಂಡರುದಾರರನ್ನು ತಿರಸ್ಕರಿಸಲಾಗುವುದು ಹಾಗೂ ಅವರ ಇಎಂ ಡಿ ಮೊತ್ತವನ್ನು ಮುತ್ತುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸು ಮಾಡಲಾಗುವುದು.**
- ಕಡಿಮೆ ಸೇವಾ ವೆಚ್ಚವನ್ನು ನಮೂದಿಸಿದ ಟೆಂಡರ್‌ದಾರರು ಯಶಸ್ವಿ ಟೆಂಡರ್‌ದಾರರಾಗುತ್ತಾರೆ ಹಾಗೂ ಟೆಂಡರ್‌ದಾರರು ನಮೂದಿಸುವ ಮೊಬಲಗಿನಲ್ಲಿ ಹಾಗೂ ಅಕ್ಷರಗಳಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ಯಾವುದು ಕಡಿಮೆಯೋ ಅದನ್ನು ಪರಿಗಣಿಸಲಾಗುವುದು.
- ಟೆಂಡರ್‌ದಾರರು ಒಂದೇ ಸಮನಾದ ಸೇವಾ ಶುಲ್ಕ/ದರವನ್ನು ನಮೂದಿಸಿದಲ್ಲಿ ಇ.ಪಿ.ಎಫ್, ಇ.ಎಸ್.ಐ.ಸಿ ಕಾರ್ಮಿಕ ಇಲಾಖೆ, ಜಿ.ಎಸ್.ಟಿ ಹಾಗು ವೃತ್ತಿ ತೆರಿಗೆ ಇಲಾಖೆಯ ಎನ್.ಓ.ಸಿ ಪ್ರತಿಯನ್ನು ನೀಡಿದ ಟೆಂಡರುದಾರರನ್ನು ಅರ್ಹರಾಗಿ ಪರಿಗಣಿಸಲಾಗುವುದು.

ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುವುದರಿಂದ 1ನೇ ಲಕೋಟೆಯಲ್ಲಿ ಅರ್ಜಿ, ಇ.ಎಂ.ಡಿ ವಿವರ ಮತ್ತು ಎಲ್ಲಾ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬೇಕು. ಹಾಗೂ 2ನೇ ಲಕೋಟೆಯಲ್ಲಿ ಸೇವಾ ವೆಚ್ಚದ ಶೇಕಡಾವಾರು ದರವನ್ನು ನಮೂದಿಸಿ ಅಪ್‌ಲೋಡ್ ಮಾಡಬೇಕು.

6. ಇ.ಎಂ.ಡಿ ಮೊತ್ತ :–

1) ಟೆಂಡರ್‌ಗೆ ನಿಗದಿಪಡಿಸಲಾಗಿರುವ ಇ.ಎಂ.ಡಿ ಮೊತ್ತರೂ.1,00,000/–.(ವಾರ್ಷಿಕ ಹೊರಗುತ್ತಿಗೆ ಸಿಬ್ಬಂದಿ ವೆಚ್ಚದ ಶೇ.2 ರಷ್ಟು) ಆಗಿರುತ್ತದೆ. ಸದರಿ ಇ.ಎಂ.ಡಿ ಮೊತ್ತವನ್ನು **e-portal** ನಲ್ಲಿ **Credit Card/Direct Debit/Neft & O.T.C/Net banking/Remittence at the bank counter-challen(off line payment)** ಚಲನ್ ಮೂಲಕ ಸಲ್ಲಿಸುವುದು. ಹಾಗೂ ಇ–ಟೆಂಡರ್ ದಸ್ತಾವೇಜಿನ ಜೊತೆಗಿರುವ ನಮೂನೆಯಲ್ಲಿ ಇ.ಎಂ.ಡಿ. ಪಾವತಿಸಿದ ಮಾಹಿತಿಯನ್ನು ಸಲ್ಲಿಸುವುದು.

2) ಯಶಸ್ವಿ ಟೆಂಡರ್‌ದಾರರು LOA ನೀಡಿದ ನಂತರ 7 ದಿನಗಳ ಅವಧಿಯಲ್ಲಿ ಕರಾರು ಮಾಡಿಕೊಂಡು ಶೇ5% Performance Security ಗೆ ಸಂಬಂಧ BG/DD/FDR ಇ.ಎಂ.ಡಿ ಬಾಬ್ತನ್ನು ಇಲ್ಲದಿದ್ದಲ್ಲಿ ಮುಟ್ಟುಗೋಲು

Scanned with OKEN Scanner

ಹಾಕಿಕೊಳ್ಳಲಾಗುವುದು. ಅಲ್ಲದೇ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲೂ ಸಹ ಕಾರ್ಯದೇಶ ರದ್ದುಪಡಿಸಿ Performance Securityಗಳೂ Nationalised bank ಗೆ ಸಲ್ಲಿಸಬೇಕು.ಇಲ್ಲದಿದ್ದಲ್ಲಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3) ಯಶಸ್ವಿಯಾಗದ ಟೆಂಡರ್‌ದಾರರ ಇ.ಎಂ.ಡಿ ಯನ್ನು ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶ ನೀಡಿದ ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು. ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶದ ಅವಧಿಯ ಅಂತ್ಯದವರೆಗೆ ಯಾವುದೇ ಕಾರಣಕ್ಕೂ ಇ.ಎಂ.ಡಿ ಮತ್ತು ಕಾರ್ಯಾಧಾರಿತ ಭದ್ರತಾ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.

7) ಟೆಂಡರ್ ಸಲ್ಲಿಸುವಿಕೆ :-

1) ಟೆಂಡರ್‌ದಾರರು **E-Portal** ಮೂಲಕ ಟೆಂಡರ್ ಸಲ್ಲಿಸುವುದು. ಈ ಬಗ್ಗೆ ಟೆಂಡರ್‌ದಾರರಿಗೆ ನಿಗದಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಹಾಗೂ ದಾಖಲಾತಿಗಳು ಇರತಕ್ಕದ್ದು.

2) ಟೆಂಡರ್ ಅರ್ಜಿ ಬೆಲೆ ಯನ್ನು ಇ-ಸಂಗ್ರಹಣಾ ನಿಯಮದ ಪ್ರಕಾರ ಇ-ಪೋರ್ಟಲ್ ಮೂಲಕ ಪಾವತಿಸಬೇಕು.

3) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **Website kppp.karnataka.gov.in.**ನಲ್ಲಿ ದಿನಾಂಕ 25-09-2024 ರಿಂದ 10-10-2024 ರ ಸಂಜೆ 4.00 ಗಂಟೆವರೆಗೆ ಪಡೆಯಬಹುದಾಗಿದೆ.

ಇ-ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿ: 10-10-2024 ರ ಸಂಜೆ 5.00 ಗಂಟೆಯಾಗಿರುತ್ತದೆ.

4) ಟೆಂಡರ್ ದಿನಾಂಕವನ್ನು ವಿಸ್ತರಿಸುವ/ಟೆಂಡರ್ ಲಕೋಟೆಗಳನ್ನು ತೆರೆಯುವ ದಿನಾಂಕವನ್ನು ವಿಸ್ತರಿಸುವ/ಟೆಂಡರ್ ಪ್ರಕ್ರಿಯೆಯನ್ನು ತಾತ್ಕಾಲಿವಾಗಿ ತಡೆಹಿಡಿಯುವ ಅಥವಾ ಸಂಪೂರ್ಣ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವ ಅಧಿಕಾರ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

ಟೆಂಡರ್‌ಗೆ ನಿಗದಿಪಡಿಸಿರುವ ಸಂಸ್ಥೆಗಳ ಸಂಖ್ಯೆ, ಖಾಲಿ ಇರುವ ಹುದ್ದೆಗಳ ಸಂಖ್ಯೆ ಹಾಗೂ ಪಾವತಿ ಮಾಡಬೇಕಾದ ವೇತನದ ಬಾಬ್ತು ಇತ್ಯಾದಿಗಳು ಬದಲಾವಣೆಗೆ ಒಳಪಟ್ಟಿರುತ್ತದೆ.

8.ಟೆಂಡರ್ ತೆರೆಯುವುದು ಮತ್ತು ಮೌಲ್ಯಮಾಪನ ಮಾಡುವುದು :-

e-procurement ಮೂಲಕ ಟೆಂಡರ್ ತೆರೆದು ತಾಂತ್ರಿಕವಾಗಿ ಅರ್ಹವಾಗಿರುವ ಬಿಡ್‌ದಾರರ ಹಣಕಾಸು ಬಿಡ್‌ಗಳನ್ನು ಮಾತ್ರ ತೆರೆದು ಮೌಲ್ಯಮಾಪನ ಮಾಡಿ ನಿಯಮಾನುಸಾರ ಅರ್ಹ ಟೆಂಡರ್‌ದಾರರನ್ನು ಆಯ್ಕೆ ಮಾಡಲಾಗುವುದು.

1. ಇ-ಪೋರ್ಟಲ್ ನಲ್ಲಿ ತಾಂತ್ರಿಕ ಬಿಡ್ ತೆರೆದು ಟೆಂಡರ್ ನಿಬಂಧನೆಗಳು ಮತ್ತು ಟೆಂಡರ್‌ದಾರರು ಒದಗಿಸುವ ದಾಖಲಾತಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು.
2. ಎಲ್ಲಾ ರೀತಿಯಲ್ಲೂ ಸರಿಯಾಗಿರುವ ತಾಂತ್ರಿಕ ಬಿಡ್ ಮಾತ್ರ ಒಪ್ಪಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು.

Scanned with OKEN Scanner

9. ಟೆಂಡರ್ ಅವಾರ್ಡ್ ಮಾಡುವುದು :-

ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ ಅತೀ ಕಡಿಮೆ ಶೇಕಡವಾರು ಸೇವಾ ವೆಚ್ಚವನ್ನು ನಮೂದಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಿ ಅವರಿಗೆ ಕಾರ್ಯಾದೇಶ ನೀಡಲಾಗುವುದು. ಅವಶ್ಯವಿದ್ದಲ್ಲಿ ಸೇವಾ ವೆಚ್ಚವನ್ನು ಕಡಿಮೆ ನಮೂದಿಸಿದ ಟೆಂಡರ್‌ದಾರರೊಡನೆ ಸೇವಾವೆಚ್ಚ ನಿಗದಿಗಾಗಿ **ನೆಗೋಷಿಯೇಷನ್ ಮಾಡಲು ಟೆಂಡರ್ ಕರೆದಿರುವ** ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

1) ಟೆಂಡರುದಾರರು ಒಂದೇ ಸಮನಾದ ಸೇವಾ ಶುಲ್ಕ/ದರವನು ನಮೂದಿಸಿದಲ್ಲಿ ಸೇವಾ ಹಿನ್ನೆಲೆಯ ಆಧಾರದ ಅಂಗೀಕಾರ ಪರಿಗಣಿಸುವುದರಿಂದ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ. ಅಂತಹ ಟೆಂಡರುದಾರರಿಗೆ ಟೆಂಡರ್ ಅವಾರ್ಡ್ ಮಾಡಲಾಗುವುದು.
2) ಟೆಂಡರ್‌ಗಳ ಆರ್ಥಿಕ ಲಕೋಟೆಗಳನ್ನು ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ.
3) ಟೆಂಡರ್ ಅವಧಿಯು ತಿಳಿಸಿದ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ. ಈ ಪೂರ್ಣ ಅವಧಿಗೆ ಸಿಬ್ಬಂದಿಗಳ ಸೇವೆ ನೀಡಬೇಕು.
4) ಟೆಂಡರ್ ಕರೆದ 90 ದಿನಗಳಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ಅಥವಾ ಒಂದು ವೇಳೆ ಟೆಂಡರ್‌ದಾರರು ಲಿಖಿತ ಒಪ್ಪಿಗೆ ನೀಡಿದುದರ ಮೇರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ಟೆಂಡರ್ ರದ್ದಾಗುತ್ತದೆ.

10.ಟೆಂಡರ್ ಗುತ್ತಿಗೆಯ ಕರಾರು ಒಪ್ಪಂದವನ್ನು ಸಹಿ ಮಾಡುವುದು :-

ಯಶಸ್ವಿ ಟೆಂಡರ್‌ದಾರರಿಗೆಕಾರ್ಯಾದೇಶನೀಡಲಾಗುವುದು, ಕಾರ್ಯಾದೇಶ ಪಡೆದ ನಂತರ ಮುಖ್ಯಲೆಕ್ಕಪರಿಶೋಧಕರ ಕಛೇರಿ,ನಿಗಧಿತ ನಮೂನೆಯಲ್ಲಿ ಟೆಂಡರ್ ನಿಬಂಧನೆಗಳೊಂದಿಗೆ ಷರತ್ತುಗಳನ್ನೊಳಗೊಂಡ ಕರಾರು ಪತ್ರಕ್ಕೆ ಸಹಿ ಮಾಡತಕ್ಕದ್ದು.

11.ಟೆಂಡರ್‌ದಾರರಿಗೆ ಸೂಚನೆಗಳು ಮತ್ತು ಷರತ್ತುಗಳು :

ಅ) ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು :-

ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ದಾರರಿಗೆ ಸೂಚನೆಗಳು ವಿಭಾಗದ ಕ್ರಮ ಸಂಖ್ಯೆ (2)ರಲ್ಲಿ ಸೂಚಿಸಲಾಗಿರುವ ಎಲ್ಲಾ ಅರ್ಹತೆ ಮತ್ತು ದಾಖಲಾತಿಗಳನ್ನು ಹೊಂದಿರಬೇಕು. ಎಲ್ಲಾ ದಾಖಲಾತಿಗಳ ಒಂದು ಜೆರಾಕ್ಸ್ ಪ್ರತಿಯನ್ನು ನೋಟರಿಯಿಂದ ದೃಢೀಕರಿಸಿ ದ್ವಿ ಲಕೋಟೆ ಪದ್ಧತಿಯನ್ವಯ ಟೆಂಡರ್ ಸಲ್ಲಿಸುವುದು.

ಆ) ಟೆಂಡರ್‌ದಾರರ ಜವಾಬ್ದಾರಿಗಳು :-

1. ಟೆಂಡರ್‌ದಾರರು ಟೆಂಡರ್ ಷೆಡ್ಯೂಲ್‌ನಲ್ಲಿ ಹೇಳಿರುವಂತೆ ಮುಖ್ಯಲೆಕ್ಕಪರಿಶೋಧಕರ ಕಛೇರಿ ನೀಡುವ ಆದೇಶ ತಲುಪಿದ ದಿನಾಂಕ ದಿಂದ **ಎರಡು** ವರ್ಷದವರೆಗೆ ಅಥವಾ ಮುಂದಿನ ಆದೇಶದವರೆಗೆ ವಿವಿಧ ಸಿಬ್ಬಂದಿಗಳ ಸೇವೆಯನ್ನು ಒದಗಿಸಬೇಕು.ಸದರಿ ಸೇವೆಯು ತಾತ್ಕಾಲಿಕವಾಗಿದ್ದು, ಇತರೇ ಯಾವುದೇ ಸವಲತ್ತುಗಳಿಗೆ ನಿಯೋಜಿತ ಸಿಬ್ಬಂದಿಯವರು ಅರ್ಹರಿರುವುದಿಲ್ಲ.
2. ಈ ರೀತಿ ಸಿಬ್ಬಂದಿಯನ್ನು ಒದಗಿಸುವಾಗ ಅನುಬಂಧ (1)ರಲ್ಲಿ ಸಿಬ್ಬಂದಿಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆ, ಅನುಭವ ಹೊಂದಿರುವವರನ್ನೇ ಒದಗಿಸಬೇಕು.

Scanned with OKEN Scanner

3. ಏಜೆನ್ಸಿಯು ಹೆಚ್ಚು ಅನುಭವವುಳ್ಳ ಸೇವಾ ಸಿಬ್ಬಂದಿಯನ್ನು ಈ ಕಛೇರಿಗೆ ನೀಡಬೇಕು.ಮುಖ್ಯಲೆಕ್ಕಪರಿಶೋಧಕರ ವ್ಯಾಪ್ತಿಯಲ್ಲಿ ಅವರ ಮಾರ್ಗದರ್ಶನದಲ್ಲಿ ಸೇವೆ ಸಲ್ಲಿಸುವಂತಿರಬೇಕು.
4. ಈ ರೀತಿ ನೇಮಕಗೊಂಡ ಹೊರ ಸಂಪನ್ಮೂಲ ಸಿಬ್ಬಂದಿಯು ಅಧಿಕಾರಿಗಳ ವ್ಯಾಪ್ತಿಯಲ್ಲಿ ಅವರ ಮಾರ್ಗದರ್ಶನದಂತೆ ಸೇವೆ ಸಲ್ಲಿಸುವಂತಿರಬೇಕು.
5. ಯಾವುದೇ ಕಾರಣಕ್ಕೂ ಅಧಿಕಾರಿಗಳ ಗಮನಕ್ಕೆ ತರದೆ ಏಜೆನ್ಸಿಯು ತನ್ನ ಸಿಬ್ಬಂದಿಗಳನ್ನು ಹಿಂಪಡೆಯಬಾರದು ಹಾಗು ವರ್ಗಾವಣೆ ಮಾಡಬಾರದು. ಇದನ್ನು ಟೆಂಡರ್ ಷರತ್ತುಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.
6. ಟೆಂಡರ್‌ದಾರರು ನಿಯೋಜಿಸುವ ಸಿಬ್ಬಂದಿ ವರ್ಗದವರು ಪ್ರತಿ ತಿಂಗಳು ಒಂದು ದಿನ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಆದರೆ, 15 ದಿನಗಳಿಗಿಂತ ಹೆಚ್ಚು ಕಾಲ ರಜೆ ಹೋದಲ್ಲಿ ಅವರ ವೇತನವನ್ನು ಕಡಿತಗೊಳಿಸಲಾಗುವುದು. ಒಂದು ವೇಳೆ 15 ದಿನ ರಜೆ ಪಡೆದಲ್ಲಿ ಬದಲಿ ಸಿಬ್ಬಂದಿ ವ್ಯವಸ್ಥೆಯನ್ನು ಟೆಂಡರ್‌ದಾರರು ಮಾಡಬೇಕು.
7. ಟೆಂಡರ್‌ದಾರರು ನಿಯೋಜಿಸುವ ಸಿಬ್ಬಂದಿಗಳು ಉತ್ತಮ ನಡತೆ ಹೊಂದಿರತಕ್ಕದ್ದು. ಪಾನಮತ್ತರಾಗಿರುವುದು, ಭಂಗಿ, ಸಿಗರೇಟು ಸೇದುವುದು ನಿಷೇಧಿಸಿದೆ.
8. ಈ ಹುದ್ದೆಗಳಿಗೆ ಸೇವೆಯನ್ನು ಹೊರ ಸಂಪನ್ಮೂಲದಿಂದ ನೇಮಕ ಮಾಡಲಾಗುತ್ತಿದೆಯೇ ಹೊರತು ಇದು ಖಾಯಂ ನೇಮಕಾತಿಯಾಗಿರುವುದಿಲ್ಲ. ಹಾಗೂ ತಾತ್ಕಾಲಿಕವಾಗಿರುತ್ತದೆ.
9. ಅಂಗೀಕೃತ ಟೆಂಡರ್‌ದಾರರು ತಮ್ಮ ಏಜೆನ್ಸಿಯಿರಿದಲೇ ನೇರವಾಗಿ ಸಿಬ್ಬಂದಿಗಳ ಸೇವೆ ಪಡೆಯಬೇಕು. ಟೆಂಡರ್ ಅಂಗೀಕೃತವಾದ ನಂತರ ಬೇರೆ ಏಜೆನ್ಸಿಗೆ ಈ ಕೆಲಸವನ್ನು ಒಳಗುತ್ತಿಗೆ ರೂಪದಲ್ಲಿ ವಹಿಸುವುದಾಗಲಿ ಅಥವಾ ಸಿಬ್ಬಂದಿಗಳ ನಿರ್ವಹಣೆ/ದಾಖಲಾತಿಗಳನ್ನು ಬೇರೆಯವರಿಂದ ಮಾಡಿಸುವುದಾಗಲಿ ಮಾಡಬಾರದು.
10. ಟೆಂಡರ್ ಪ್ರಕಟಣೆಯಲ್ಲಿ ನೀಡಿದ ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ. ಹಾಗೂ ಟೆಂಡರ್ ಪ್ರಕಟಣೆಯಲ್ಲಿನ ಹುದ್ದೆಗಳಿಗೆ ಕಾರ್ಯಾದೇಶ ನೀಡುವ ಮತ್ತು ನೀಡದೇ ಇರುವ ಅಧಿಕಾರ ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಇರುತ್ತದೆ.
11. ಟೆಂಡರ್‌ದಾರರು ಒದಗಿಸಿದ ಸಿಬ್ಬಂದಿಗಳು ಗೈರು ಹಾಜರಾದಲ್ಲಿ ಇಲಾಖೆಯು ಮಾಡಿಕೊಳ್ಳುವ ಬದಲಿ ವ್ಯವಸ್ಥೆಗೆ ತಗಲುವ ವೆಚ್ಚವನ್ನು ಟೆಂಡರ್‌ದಾರರೇ ಭರಿಸಬೇಕು.
12. ಯಾವುದೇ ಹುದ್ದೆ ಕಾಲ-ಕಾಲಕ್ಕೆ ವರ್ಗಾವಣೆ/ನಿವೃತ್ತಿ/ನೇಮಕಾತಿ ಇತರೆ ಕಾರಣಗಳಿಂದ ತೆರವಾಗುವುದರಿಂದ/ ಭರ್ತಿಯಾಗುವುದರಿಂದ ಹುದ್ದೆಗಳ ಸಂಖ್ಯೆ ಬದಲಾವಣೆಗೆ ಒಳಪಟ್ಟಿರುತ್ತದೆ.
13. ಟೆಂಡರ್‌ದಾರರು ಹುದ್ದೆಗಳಿಗೆ ನೀಡುವ ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಪ್ರಾಣಾಪಾಯ, ಆಕಸ್ಮಿಕ, ಅಪಘಾತ ಘಟನೆಗಳು ಸಂಭವಿಸಿದ್ದಲ್ಲಿ ಅದಕ್ಕೆ ಟೆಂಡರ್‌ದಾರರೆ ಸ್ವತ: ಹೊಣೆಗಾರರಾಗಿದ್ದು, ಪರಿಹಾರ ನೀಡಲು ಬದ್ದರಾಗಿರುತ್ತಾರೆ.
14.

12. ಸಿಬ್ಬಂದಿ ವೇತನ ಜವಾಬ್ದಾರಿ :-

1) ವಿವಿಧ ವರ್ಗದ ಸಿಬ್ಬಂದಿಗಳಿಗೆ ನೀಡುವ ವೇತನ ಇ.ಎಸ್.ಐ ಮತ್ತು ಇ.ಪಿ.ಎಫ್ ಕಡಿತಗಳು, ಜಿ.ಎಸ್.ಟಿ. ತೆರಿಗೆ ಕಡಿತಗಳ ವಿವರಗಳನ್ನು ನೀಡಲಾಗುವುದು. ಅದರಂತೆ, ಪ್ರತಿ ಸಿಬ್ಬಂದಿಗೆ ಅವರ ಹುದ್ದೆ ಹೆಸರಿನ ಮುಂದೆ ತೋರಿಸಿರುವ ವಿವರಗಳಂತೆನಿವ್ವಳವೇತನವನ್ನು (Take home salary) ವನ್ನು ಆಯಾ ಹುದ್ದೆಗಳಿಗನುಸಾರ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುವಮೂಲಕ ವೇತನವನ್ನು ಟೆಂಡರ್‌ದಾರರು ಪಾವತಿಸಬೇಕು.

Scanned with OKEN Scanner

2) ಸಿಬ್ಬಂದಿಯ ವೇತನ ಮತ್ತು ಇತರೆ ಕಡಿತಗಳನ್ನು ಟೆಂಡರ್‌ದಾರರು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣದಿಂದ ಭರಿಸಿ ಆ ಕೆಲಸದ ತಿಂಗಳು ಮುಗಿದ ನಂತರ ಬ್ಯಾಂಕಿಗೆ ಬಿಲ್ ಸಲ್ಲಿಸುವ ಮುಖಾಂತರ ಹಣದ ಮರುಪಾವತಿ ಪಡೆಯತಕ್ಕದ್ದು.

3) ಅನುದಾನ ಲಭ್ಯತೆಯ ಅನುಸಾರ ವೇತನ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು. ಅನುದಾನ ಅಲಭ್ಯತೆಯಿಂದ ಹಣ ಪಾವತಿಗೆ ವಿಳಂಬವಾದರೂ ಸಹ ಎಜೆನ್ಸಿಯವರು ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲು ಬದ್ಧರಾಗಿರಬೇಕು.

4) ಪ್ರತಿ ಮಾಹೆಯ ಬಿಲ್ ದಿನಾಂಕ 25 ರಿಂದ 24ರವರೆಗೆ ಪರಿಗಣಿಸಿ ಈ ಕಛೇರಿಗೆ ದಿನಾಂಕ 25 ರಂದು ಬಿಲ್ಲನ್ನು ಈ ಕಛೇರಿಗೆ ಸಲ್ಲಿಸಬೇಕಾಗಿರುತ್ತದೆ.

13) ಸಿಬ್ಬಂದಿ ವೇತನದಲ್ಲಿ ಕಡಿತಗೊಳಿಸಬಹುದಾದ ಬಾಬ್ತುಗಳು :

1) <u>ವೃತ್ತಿ ತೆರಿಗೆ (Professional Tax):</u> ನೌಕರನ ಒಟ್ಟು ವೇತನದಲ್ಲಿ PF, ESIಗಳನ್ನು ಕಡಿತಗೊಳಿಸಿ ಸರ್ಕಾರಕ್ಕೆ ಜಮಾ ಮಾಡುವುದು. ಈ ಬಗ್ಗೆ ಅನುಬಂಧ (3) ರಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

2) <u>G.S.T :</u> ಟೆಂಡರ್‌ದಾರರು ಮಾನವ ಹೊರ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಒಟ್ಟು ವೇತನಕ್ಕೆ 18% ರಷ್ಟು ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಅದಕ್ಕಾಗಿ ಪ್ರತಿ ತಿಂಗಳು G.S.T ತೆರಿಗೆ ಪಾವತಿಸಿದ ಚಲನ್‌ಗಳನ್ನು ಇಲಾಖೆಗೆ ಹಾಜರುಪಡಿಸಬೇಕು. ಮತ್ತು ಪೂರ್ವಭಾವಿಯಾಗಿ ಪಾವತಿಸಿ ಇಲಾಖೆಯಿಂದ ಮರುಪಾವತಿ ಪಡೆಯಬೇಕು. ಈ ಬಗ್ಗೆ ಅನುಬಂಧ (3)ರಲ್ಲಿ ಹೇಳಿರುವ ಎಲ್ಲಾ ದಾಖಲೆಗಳನ್ನು ನಿರ್ವಹಿಸಬೇಕು.

14) ಇತರೆ ನಿಬಂಧನೆಗಳು:–

- ಟೆಂಡರ್‌ದಾರರು ಪ್ರತಿ ತಿಂಗಳು ಈ ನೌಕರರಿಗೆ ಸಂಬಂಧಿಸಿದಂತೆ ಅನುಬಂಧ (2)ರಲ್ಲಿ ಹೇಳಿರುವ ವಿವರದಂತೆ ನೌಕರನಿಗೆ ವೇತನ ನೀಡುವುದು. ಮತ್ತು ಕಡಿತಗಳನ್ನು ಸಂಬಂಧಪಟ್ಟ ನೌಕರರ ವೈಯಕ್ತಿಕ ಖಾತೆಗಳಿಗೆ ಜಮಾ ಮಾಡುವುದು ಇವೆಲ್ಲವನ್ನು ಪೂರ್ವಭಾವಿಯಾಗಿ ತಮ್ಮ ಸ್ವಂತ ಹಣ ಭರಿಸಿ ಟೆಂಡರ್‌ದಾರರು ಹಣ ಪಾವತಿಸತಕ್ಕದ್ದು ಈ ರೀತಿ ಪಾವತಿಸಿದ ಕಡಿತಗಳ ವಿವರಗಳನ್ನು ಈ ತಿಂಗಳು ಮುಗಿದ ನಂತರ ಸಂಬಂಧಪಟ್ಟ ಓಚರ್‌ಗಳು, ಚಲನ್‌ಗಳ ದಾಖಲೆಗಳನ್ನು ಹಾಜರುಪಡಿಸಿ ಈ ಎಲ್ಲಾ ಹಣವನ್ನು ಇಲಾಖೆಯಿಂದ ಮರುಪಾವತಿ ಮಾಡಿಕೊಳ್ಳುವುದು ಯಾವುದೇ ಕಾರಣಕ್ಕೂ ಮರು ಪಾವತಿ ಅಲ್ಲದೇ ಮುಂಗಡವಾಗಿ ಟೆಂಡರ್‌ದಾರರಿಗೆ ಹಣವನ್ನು ನೀಡಲಾಗುವುದಿಲ್ಲ ಟೆಂಡರ್‌ದಾರರು ಯಾವುದೇ ಕಾರಣಕ್ಕೂ 2 ತಿಂಗಳಿಗೂ ಹೆಚ್ಚು ಕಾಲ ವೇತನ ಪಾವತಿಯನ್ನು ವಿಳಂಬ ಮಾಡುವಂತಿಲ್ಲ. ಹಾಗೆ ಮಾಡಿದಲ್ಲಿ ಇದು ಟೆಂಡರ್ ಷರತ್ತು ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರ್ ರದ್ದು ಮಾಡಲಾಗುವುದು.
- ಟೆಂಡರ್‌ದಾರನು ತಾನು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸಬಾರದು ಮತ್ತು ಉಪ ಗುತ್ತಿಗೆ ನೀಡಬಾರದು. ಇದು ಟೆಂಡರ್ ಷರತ್ತಿನ ಉಲ್ಲಂಘನೆ ಆಗುತ್ತದೆ.
- ನೌಕರರಿಗೆ ಚೆಕ್/ಆನ್ ಲೈನ್ ವರ್ಗಾವಣೆ ಮುಖಾಂತರ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ತಪ್ಪದೇ ಪಾವತಿಸಬೇಕು. ವಿವಿಧ ವಂತಿಕೆಗಳ ಕಡಿತಗಳನ್ನು ಮಾಡಿದ ಬಗ್ಗೆ ನೌಕರನಿಗೆ ಪ್ರತಿ ತಿಂಗಳು ಸಂಬಂಧಪಟ್ಟ ಬ್ಯಾಂಕುಗಳಿಂದ ಸ್ಟೇಟ್‌ಮೆಂಟ್ ಪಡೆದು ನೌಕರರಿಗೆ ನೀಡುವುದು ಹಾಗೂ ಮುಖ್ಯಲೆಕ್ಕಪರಿಶೋಧಕರ ಕಛೇರಿಗೆ ಒಂದು ಪ್ರತಿಯನ್ನು ನೀಡುವುದು.

Scanned with OKEN Scanner

- ಎಲ್ಲಾ ಟೆಂಡರ್ ಷರತ್ತುಗಳನ್ನು ಪಾಲಿಸುವುದಾಗಿಯೂ ಯಶಸ್ವಿ ಟೆಂಡರ್‌ದಾರರು ಗುತ್ತಿಗೆ ಕರಾರು ಒಪ್ಪಂದಕ್ಕೆ ಸಹಿ ಮಾಡಬೇಕು.
- ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಮುಖ್ಯಲೆಕ್ಕಪರಿಶೋಧಕರ ಕಛೇರಿಅವರಿಗೆ ಒಂದು ತಿಂಗಳ ಲಿಖಿತ ನೋಟೀಸ್ ನೀಡಿ ಗುತ್ತಿಗೆಯನ್ನು ರದ್ದುಪಡಿಸುವ ಹಾಗೂ ಇ.ಎಂ.ಡಿ, ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಟೆಂಡರ್‌ದಾರರ ಮೇಲೆ ನಿಯಮಾನುಸಾರ ಕ್ರಿಮಿನಲ್ ದಾವೆ ಹೂಡುವ ಅಧಿಕಾರವನ್ನು ಹೊಂದಿರುತ್ತದೆ ಇದೇ ರೀತಿ ಗುತ್ತಿಗೆದಾರರು ಗುತ್ತಿಗೆ ಕಾರ್ಯವನ್ನು ನಿಲ್ಲಿಸುವುದಿದ್ದಲ್ಲಿ ಕನಿಷ್ಠ 2 ತಿಂಗಳ ಮುಂಚೆ ಲಿಖಿತವಾಗಿ ಈ ಕಛೇರಿಯ ಮುಖ್ಯಸ್ಥರಿಗೆ ನೀಡುವುದು.
- ಮುಖ್ಯಲೆಕ್ಕಪರಿಶೋಧಕರ ಕಛೇರಿಗೆ ಮತ್ತು ಟೆಂಡರ್‌ದಾರರ ಮಧ್ಯೆ ಗುತ್ತಿಗೆ ಅವಧಿಯಲ್ಲಿ ಅಥವಾ ಗುತ್ತಿಗೆ ನಂತರ ಉದ್ಭವಿಸಬಹುದಾದ ತಕರಾರುಗಳನ್ನು ಬೆಂಗಳೂರು ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾತ್ರ ಬಗೆಹರಿಸಿಕೊಳ್ಳತಕ್ಕದ್ದು.
- ಗುತ್ತಿಗೆದಾರರ ಆಯ್ಕೆಯನ್ನ ಅನುಬಂಧ–3 ರಲ್ಲಿ ವಿವರಿಸಲಾದ ತಾಂತ್ರಿಕ ಬಿಡ್ಡ್ ನದಾಖಲಾತಿಗಳನ್ನು ಪೂರ್ಣವಾಗಿ ಒದಗಿಸಿದ್ದಲ್ಲಿ ನೀಡಲಾಗುವ ಸ್ಕೋರ್‌ನಂತೆ,ಶೇ 75ಕ್ಕಿಂತ ಹೆಚ್ಚಿನ ಸ್ಕೋರ್ ಪಡೆದ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.
- ಕಾಲಕಾಲಕ್ಕೆ ವಿಧಿಸುವ ನಿಬಂಧನೆಗಳಿಗೆ ಟೆಂಡರ್‌ದಾರರು ಬದ್ಧರಾಗಿರಬೇಕು.

ಮುಖ್ಯ ಲೆಕ್ಕ ಪರಿಶೋಧಕರಕಛೇರಿ,
ಬೃಹತ್ ಬೆಂಗಳೂರು ಮಹಾನಗರಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ,
ವಾಣಿಜ್ಯಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)
(ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ)
ಬೆಂಗಳೂರು–560009.

Scanned with OKEN Scanner

ಮುಖ್ಯ ಲೆಕ್ಕ ಪರಿಶೋಧಕರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ, ವಾಣಿಜ್ಯಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)
(ಉಪ್ಪಾರಪೇಟೆ ಪೋಲೀಸ್ ಠಾಣೆ ಹಿಂಭಾಗ)
ಬೆಂಗಳೂರು–560009.

ಸಂಖ್ಯೆ: / 363 /2024–25 ದಿನಾಂಕ:– 20/09/2024

: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ :

ಮುಖ್ಯ ಲೆಕ್ಕಪರಿಶೋಧಕರ ಕಛೇರಿಗೆ ಇತರೆ ಖಾಲಿ ಇರುವ ಕಂಪ್ಯೂಟರ್ ಆಪರೇಟರ್‌ಗಳು, ಗ್ರೂಪ್ ಡಿ, ಹಾಗು ಸ್ವಚ್ಛತಾ ಸಿಬ್ಬಂದಿ ಒಟ್ಟು ಹುದ್ದೆಗಳನ್ನು ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪಡೆಯಲು ಅರ್ಹ ಏಜೆನ್ಸಿ/ಸಂಸ್ಥೆಗಳಿಂದ ಪಡೆಯಲು ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

1) ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 25–09–2024 ರಿಂದ 10–10–2024 ರವರೆಗೆ **Website.kppp.karnataka.gov.in., e-portal** ನಲ್ಲಿ ಪಡೆಯಬಹುದು. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:10–10–2024 ರ ಸಂಜೆ 5.00 ಗಂಟೆಗೆ ನಿಗಧಿಪಡಿಸಿದೆ.

ಮುಖ್ಯ ಲೆಕ್ಕ ಪರಿಶೋಧಕರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ,
ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)
(ಉಪ್ಪಾರಪೇಟೆ ಪೋಲೀಸ್ ಠಾಣೆ ಹಿಂಭಾಗ)
ಬೆಂಗಳೂರು – 560009.

Scanned with OKEN Scanner

Annexure-1

MINIMUM QUALIFICATION, AGE AND EXPERIENCE PRESCRIBED FOR THE POSTS OF DATA ENTRY OPERATOR/TYPIST,DRIVERS, AND GROUP 'D' ON OUTSOURCE BASIS.

Sl. No	Category of Posts	Minimum Qualification
01	02	03
1	Data Entry operator	Minimum qualification for this post is pass in **SSLC /PUC**examination with two years computer training course and must have knowledge of reading,writing and typing in Kannada/English
2	Group-D	Minimum qualification for this post is pass in SSLC examination, must have knowledge of reading and writing in Kannada and must have L.M.V driving licence with two year experience.
3	Sweepers	Minimum qualification for this post is pass in seventh standard examination and must have knowledge of reading and writing in Kannada

ಮುಖ್ಯ ಲೆಕ್ಕ ಪರಿಶೋಧಕರಕಛೇರಿ,
ಬೃಹತ್ ಬೆಂಗಳೂರು ಮಹಾನಗರಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ,
ವಾಣಿಜ್ಯಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)(ಉಪ್ಪಾರಪೇಟೆ
ಪೋಲೀಸ್‌ಠಾಣೆ ಹಿಂಭಾಗ)
ಬೆಂಗಳೂರು - 560009.

✧✧✧

Scanned with OKEN Scanner

Annexure-2

ಮುಖ್ಯ ಲೆಕ್ಕ ಪರಿಶೋಧಕರಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 2 & 3ನೇ ಮಹಡಿ, ಬಿಬಿಎಂಪಿ, ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್), (ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ)

ಬೆಂಗಳೂರು - 560009.

Calculation of Salary Components for Outsourcing Computer operator/ Group D, Sweeper on outsource basis.
Contributions and Deductions

A	B	C		
Sl.No	DESIGNATION	Computer operator/ Group (D)/ Sweeper		
		Data entry operator	Group (D)	SWEEPER
1	BASIC WAGES	22,000	16,198.22	19,530
2	DA WAGES (VDA)	850		
3	E.P.F @13%	1,950	1,950	1,950
4	E.S.I @3.25%	683	526	635
	TOTAL	**25,483*10**	**18,674*2**	**22,115*2**
	Estimated Cost	**2,54,830**	**37,348**	**44,230**

ಮುಖ್ಯ ಲೆಕ್ಕಪರಿಶೋಧಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

Scanned with OKEN Scanner

ಅನುಬಂಧ –3

SI. no	Criterion Description	Remarks(Score)
1	ರೂ 1,00,000/– ಇಂ.ಎಂ.ಡಿ ಮೊತ್ತವನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. ಇ–ಟೆಂಡರ್ ದಸ್ತಾವೇಜಿನ ಜೊತೆಗಿರುವ ನಮೂನೆಯ ಇ.ಎಂ.ಡಿ. ಪಾವತಿಸಿದ ಮಾಹಿತಿಯನ್ನು ಒದಗಿಸುವುದು..	5
2	ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ವ್ಯವಹಾರ ನಡೆಸಲು ಪರವಾನಗಿಯನ್ನು ಪಡೆದಿರಬೇಕು. (Indian Company or firm ACT Should be registered)	5
3	ಕಾರ್ಮಿಕ ಇಲಾಖೆಯಿಂದ ಪಡೆದಿರುವ ಫಾರಂ ಸಿ ಮತ್ತು ಡಿ ಪರವಾನಗಿ ಪ್ರತಿ ಹಾಗೂ ಕಳೆದ 03 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.	5
4	ಕಾರ್ಮಿಕ ಭವಿಷ್ಯ ನಿಧಿಯಿಂದ ಪಡೆದಿರುವ ಪರವಾನಗಿ ಪ್ರತಿ ಹಾಗೂ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.	5
5	ಇ.ಎಸ್.ಐ.ಸಿ (ಕಾರ್ಮಿಕ ರಾಜ್ಯ ವಿಮಾ ಇಲಾಖೆ) ಇಂದ ಪಡೆದಿರುವ ಪರವಾನಗಿ ಪ್ರತಿ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.	5
6	ಜಿ.ಎಸ್.ಟಿ ಪರವಾನಗಿ ಪ್ರತಿ ಲಗತ್ತಿಸುವುದು ಹಾಗೂ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.	15
7	ವೃತ್ತಿ ತೆರಿಗೆ ಕಾಯ್ದೆಯಡಿ ಪಡೆದಿರುವ ಪರವಾನಗಿ ಪ್ರತಿ ಮತ್ತು ಕಳೆದ 03 ವರ್ಷಗಳ ವೃತ್ತಿ ತೆರಿಗೆ ಕ್ಲಿಯರೆನ್ಸ್ ಪ್ರಮಾಣ ಪತ್ರ ಲಗತ್ತಿಸುವುದು.	10
8	ಸಂಸ್ಥೆ/ಸಂಘ/ಕಂಪನಿ ಪಾನ್ ಕಾರ್ಡ್ ಪ್ರತಿ ಲಗತ್ತಿಸುವುದು.	5
9	ಸಂಸ್ಥೆ/ಕಂಪನಿ ಆದಾಯ ತೆರಿಗೆಯನ್ನು 2021–22, 2022–23 ಮತ್ತು 2023–24ನೇ ಆರ್ಥಿಕ ವರ್ಷಗಳಲ್ಲಿ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು.	10
10	ಕಳೆದ ಮೂರು ವರ್ಷಗಳಿಂದ ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಪ್ರಾಧಿಕಾರ/ಇತರೆ ಸಂಸ್ಥೆಗಳಿಗೆ ಹೊರಗುತ್ತಿಗೆಯ ಸಿಬ್ಬಂದಿಗಳನ್ನು ಯಶಸ್ವಿಯಾಗಿ ಒದಗಿಸಿರುವ ಅನುಭವ ಇರಬೇಕು ಮತ್ತು ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.	15
11	ಹಿಂದಿನ ಮೂರು ವರ್ಷಗಳಲ್ಲಿ ಅಂದರೆ 2021–22, 2022–23 ಮತ್ತು 2023–24 ನೇ ಸಾಲಿನ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ದೃಢೀಕರಿಸಿದ ವಾರ್ಷಿಕ ವಹಿವಾಟುಗಳ ದಾಖಲೆಗಳು, ಬ್ಯಾಲೆನ್ಸ್‌ಶೀಟ್, ಆಡಿಟ್ ವರದಿಯ ದಾಖಲೆಗಳನ್ನು ಸಲ್ಲಿಸಬೇಕು ಹಾಗೂ ಟೆಂಡರ್‌ದಾರರು ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ಮೊತ್ತ ಪ್ರತಿ ವರ್ಷ ಕನಿಷ್ಟ ₹50 ಲಕ್ಷ ಇರತಕ್ಕದ್ದು.	5
12	ಎ.ಡಿ.ಜಿ.ಪಿ ಇವರಿಂದ ಲೈಸೆನ್ಸ್ ಪ್ರತಿ.	5
13	ಟೆಂಡರ್‌ಗಿಟ್ಟ ಮೊಬಲಗಿನ ಶೇ 30 ರಷ್ಟು (₹5,00,000)ರೂ.ಹಣದ ಬಗ್ಗೆ ದೃಢೀಕರಿಸಿರುವಬ್ಯಾಂಕ್ ಸಾಲ್ವೆನ್ಸಿ/ಲೈನ್ ಆಫ್ ಕ್ರೆಡಿಟ್ ಪ್ರಮಾಣ ಪತ್ರವನ್ನು, ಮುಖ್ಯ ಲೆಕ್ಕಪರಿಶೋಧಕರ ಕಛೇರಿ, ಬಿಬಿಎಂಪಿ, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು.	5
14	ಏಜೆನ್ಸಿಯು ಸ್ಥಳೀಯವಾಗಿ ಕಛೇರಿ ಹೊಂದಿರುವ ಬಗ್ಗೆ ಅಧಿಕೃತ ದಾಖಲೆ ಪತ್ರ (ಬಾಡಿಗೆ, ಭೋಗ್ಯ, ಕ್ರಯ,ಪತ್ರದ ಜೆರಾಕ್ಸ್).	5

ಮುಖ್ಯ ಲೆಕ್ಕಪರಿಶೋಧಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

Scanned with OKEN Scanner

ಹೊರ ಸಂಪನ್ಮೂಲದಿಂದ ಮಾನವಸೇವಾ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಬಗ್ಗೆ.

: ಟೆಂಡರ್ ಫಾರಂ 'ಎ' (ತಾಂತ್ರಿಕ ಲಕೋಟೆ) :

ಇವರಿಗೆ,

ಮುಖ್ಯ ಲೆಕ್ಕ ಪರಿಶೋಧಕರಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2 & 3ನೇ ಮಹಡಿ, ಬಿಬಿಎಂಪಿ,
ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ,(ಮೆಜೆಸ್ಟಿಕ್)
(ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ)
ಬೆಂಗಳೂರು - 560009.

ಮಾನ್ಯರೆ,

ವಿಷಯ :-2024-25 ಹಾಗೂ 2025-26 ನೇ ಸಾಲಿಗೆ ಮುಖ್ಯಲೆಕ್ಕಪರಿಶೋಧಕರ ಕಛೇರಿ, ಬಿಬಿಎಂಪಿ,ಇವರಿಗೆ ಕಂಪ್ಯೂಟರ್‌ಆಪರೇಟರ್‌ಗಳು, ನಾಲ್ಕನೇ ದರ್ಜೆ ನೌಕರರು, ಸ್ವಚ್ಛತಾ ಸಿಬ್ಬಂದಿ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯಿಂದ ಪಡೆಯುವ ಬಗ್ಗೆ

ಟೆಂಡರ್ ಸಂಖ್ಯೆ ಮತ್ತು ದಿನಾಂಕ:

ಸಂಖ್ಯೆ: / /2024-25 ದಿನಾಂಕ.

1	ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	::	ಸಂಖ್ಯೆ/ /
2	ಟೆಂಡರ್‌ದಾರರ ಹೆಸರು ಮತ್ತು ವಿಳಾಸ	::	
3	ಟೆಂಡರ್‌ದಾರರು ವ್ಯಕ್ತಿಯೇಅಥವಾ ಸಂಸ್ಥೆಯೇ? ಸಂಸ್ಥೆಯಾಗಿದ್ದಲ್ಲಿ ನೊಂದಣಿ ವಿವರಗಳು ಹಾಗೂ ಅದರ ಪ್ರತಿಗಳನ್ನು ಲಗತ್ತಿಸಬೇಕು.	::	
4	ಇ.ಎಂ.ಡಿ ಮೊತ್ತ	::	ರೂ. :
		::	
		::	
5	ಸಾಲ್ವೆನ್ಸಿ ವಿವರಗಳು (ಮೂಲ ಪ್ರತಿ ಲಗತ್ತಿಸಬೇಕು)	::	ರೂ. : ಲಕ್ಷಗಳು
		::	ಸಂಖ್ಯೆ :
		::	ಬ್ಯಾಂಕ್ ಹೆಸರು: ಸ್ಥಳ:
6	ಟೆಂಡರ್‌ದಾರರು ಮಾನವ ಸಂಪನ್ಮೂಲ ಸೇವೆಯನ್ನುಒದಗಿಸುವ ಸಂಬಂಧ ವ್ಯವಹಾರ ನಡೆಸಲು(Company &Firm)ಸಕ್ಷಮ ಪ್ರಾಧಿಕಾರದಿಂದ ನೊಂದಣಿ ಮಾಡಿಸಿರಬೇಕು ಅಥವಾ ಪರವಾನಗಿಯನ್ನು ಪಡೆದಿರಬೇಕು. (Indian Company or firm ACT	::	

Scanned with OKEN Scanner

	Should be registered)		
7	ಕಾರ್ಮಿಕ ಇಲಾಖೆಯಿಂದ ಪಡೆದಿರುವ ಫಾರಂ ಸಿ ಮತ್ತು ಡಿ ಪರವಾನಗಿ ಪ್ರತಿ ಹಾಗೂ ಕಳೆದ 03 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.		
8	ಕಾರ್ಮಿಕ ಭವಿಷ್ಯ ನಿಧಿಯಿಂದ ಪಡೆದಿರುವ ಪರವಾನಗಿ ಪ್ರತಿ ಹಾಗೂ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.	::	
9	ಇ.ಎಸ್.ಐ.ಸಿ (ಕಾರ್ಮಿಕರಾಜ್ಯ ವಿಮಾ ಇಲಾಖೆ) ಇಂದ ಪಡೆದಿರುವ ಪರವಾನಗಿ ಪ್ರತಿ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು	::	
10	ಜಿ.ಎಸ್.ಟಿ ಪರವಾನಗಿ ಪ್ರತಿ ಲಗತ್ತಿಸುವುದು ಹಾಗೂ ಕಳೆದ 3 ವರ್ಷಗಳ ಎನ್.ಓ.ಸಿ ಪ್ರತಿ ಲಗತ್ತಿಸುವುದು.	::	
11	ವೃತ್ತಿತೆರಿಗೆಕಾಯ್ದೆಯಡಿ ಪಡೆದಿರುವ ಪರವಾನಗಿ ಪ್ರತಿ ಮತ್ತು ಕಳೆದ 03 ವರ್ಷಗಳ ವೃತ್ತಿತೆರಿಗೆಕ್ಲಿಯರೆನ್ಸ್ ಪ್ರಮಾಣ ಪತ್ರ ಲಗತ್ತಿಸುವುದು.	::	
12	ಸಂಸ್ಥೆ/ಸಂಘ/ಕಂಪನಿ ಪಾನ್‌ಕಾರ್ಡ್ ಪ್ರತಿ ಲಗತ್ತಿಸುವುದು.	::	
13	ಸಂಸ್ಥೆ/ಕಂಪನಿ ಆದಾಯತೆರಿಗೆಯನ್ನು 2021–22, 2022–23 ಮತ್ತು 2023–24ನೇ ಆರ್ಥಿಕ ವರ್ಷಗಳಲ್ಲಿ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸಬೇಕು.	::	
14	ಕಳೆದ ಮೂರು ವರ್ಷಗಳಿಂದ ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಪ್ರಾಧಿಕಾರ/ಇತರೆ ಸಂಸ್ಥೆಗಳಿಗೆ ಹೊರಗುತ್ತಿಗೆಯಸಿಬ್ಬಂದಿಗಳನ್ನು ಯಶಸ್ವಿಯಾಗಿ ಒದಗಿಸಿರುವ ಅನುಭವಇರಬೇಕು ಮತ್ತು ಪ್ರಮಾಣ ಪತ್ರ ಪಡೆದು ಲಗತ್ತಿಸಬೇಕು.	::	
15	ಹಿಂದಿನ ಮೂರು ವರ್ಷಗಳಲ್ಲಿ ಅಂದರೆ 2021–22, 2022–23 ಮತ್ತು 2023–24 ನೇ ಸಾಲಿನ ಚಾರ್ಟರ್ಡ್‌ಅಕೌಂಟೆಂಟ್‌ರವರಿಂದ ದೃಢೀಕರಿಸಿದ ವಾರ್ಷಿಕ ವಹಿವಾಟುಗಳ ದಾಖಲೆಗಳು, ಬ್ಯಾಲೆನ್ಸ್‌ಶೀಟ್, ಆಡಿಟ್ ವರಧಿಯ ದಾಖಲೆಗಳನ್ನು ಸಲ್ಲಿಸಬೇಕು ಹಾಗೂ ಟೆಂಡರ್‌ದಾರರು ವ್ಯವಹರಿಸಿರುವ ವಾರ್ಷಿಕ ವಹಿವಾಟುಗಳ ಮೊತ್ತ ಪ್ರತಿ ವರ್ಷ ಕನಿಷ್ಟ ₹50 □□□□ ಇರತಕ್ಕದ್ದು. ಲಕ್ಷ	::	
16	ಎ.ಡಿ.ಜಿ.ಪಿ ಇವರಿಂದ ಲೈಸೆನ್ಸ್ ಪ್ರತಿ.	::	

Scanned with OKEN Scanner

17	ಟೆಂಡರ್‌ಗಿಟ್ಟ ಮೊಬಲಗಿನ ಶೇ 30 ರಷ್ಟು **(15,00,000)**ರೂ. ಹಣದ ಬಗ್ಗೆ ದೃಢೀಕರಿಸಿರುವ ಬ್ಯಾಂಕ್ ಸಾಲ್ವೆನ್ಸಿ/ಲೈನ್‌ಆಫ್‌ಕ್ರೆಡಿಟ್ ಪ್ರಮಾಣ ಪತ್ರವನ್ನುವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕರಾಜ್ಯ ಸಹಕಾರಿಕೃಷಿ ಮತ್ತುಗ್ರಾಮೀಣಅಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರುಇವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು.	::	
18	ಇಲಾಖೆಯಿಂದಟೆಂಡರ್‌ದಾರರಿಗೆ ಬಿಲ್‌ನ ಮೊತ್ತ ಪಾವತಿಸಲು ವಿಳಂಬವಾದರೂ ಸಹ ಮೂರು ತಿಂಗಳ ಕಾಲ ಸಿಬ್ಬಂದಿಗಳಿಗೆ ವೇತನ ಪಾವತಿಸುವ ಬಗೆಗೆ ಒಪ್ಪಿಗೆ ಪತ್ರ.	::	
19	ಏಜೆನ್ಸಿಯು ಸ್ಥಳೀಯವಾಗಿ ಕಛೇರಿ ಹೊಂದಿರುವ ಬಗ್ಗೆ ಅಗತ್ಯ ದಾಖಲೆಗಳಾದ ಲೇಬರ್ ಲೈಸೆನ್ಸ್ ಅಥವಾ ಟ್ರೇಡ್ ಲೈಸೆನ್ಸ್ ಅನ್ನು ಸಲ್ಲಿಸತಕ್ಕದ್ದು.	::	
20	ಕಪ್ಪು ಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೂ ರೂ. 100 ರ ಛಾಪಾ ಕಾಗದದಲ್ಲಿ ಕಪ್ಪು ಪಟ್ಟಿಯಲ್ಲಿ ಸೇರಿರದೇ ಇರುವ ಬಗ್ಗೆ ಹಾಗೂ ಚುನಾಯಿತ ಸದಸ್ಯರಲ್ಲದೇ ಇರುವ ಬಗ್ಗೆ ಅಫಿಡೆವಿಟ್ ಮೂಲ ಪ್ರತಿಯ ದೃಢೀಕೃತ ಪ್ರತಿ.	::	

ಸ್ಥಳ :
ದಿನಾಂಕ :

ಟೆಂಡರ್‌ದಾರರ ಹೆಸರು
ಸಹಿ ಮತ್ತು ಮೊಹರು

Scanned with OKEN Scanner